# ಹಿರಿಯ ಶ್ರೇಣಿ ದಿವಾಣಿ ನ್ಯಾಯಾಲಯ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಹೊನ್ನಾವರ

**ಸಿ ಸಿ ನಂಃ 94/2020**

ಫಿರ್ಯಾದಿಃ ಹೊನ್ನಾವರ ಪೋಲಿಸ್ ಠಾಣೆ ಪರವಾಗಿ
ಹೊನ್ನಾವರ.

**- ವಿರುದ್ಧ -**

ಆರೋಪಿತರುಃ

1. ಸಜ್ಜಾದ ಅಹ್ಮದ ತಂದೆ ಕುತುಬುದ್ದೀನ್ ಗನಿ,
ವಯಸ್ಸುಃ 28 ವರ್ಷಗಳು,
ಉದ್ಯೋಗಃ ಅಡಿಕೆ ವ್ಯಾಪಾರ,

2. ಮುಬಾಸೀರ ತಂದೆ ಕುತುಬುದ್ದೀನ್ ಗನಿ,
ವಯಸ್ಸುಃ 30 ವರ್ಷಗಳು,
ಉದ್ಯೋಗಃ ಇಲೆಕ್ಟ್ರಿಷೀಯನ್,

ಇಬ್ಬರೂ ವಾಸ್ತವ್ಯಃ ತೊಹಿದ ಮುಲ್ಲಾ, ಚಂದಾವರ.

**ದೋಷಾರೋಪಣೆ**

ಶ್ರೀ ಕುಮಾರ ಜಿ ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾಯಿಕ ದಂಡಾಧಿಕಾರಿಯಾದ ನಾನು ಆರೋಪಿಗಳಾದ ನಿಮ್ಮ ಮೇಲೆ ಈ ಕೆಳಕಂಡ ದೋಷರೋಪಣೆಗಳನ್ನ ಹೊರಿಸುತ್ತಿದ್ದೇನೆ.

1) ಮೊದಲನೆಯದಾಗಿ ಆರೋಪಿಗಳಾದ ನೀವು ದಿನಾಂಕ 24-12-2019 ರ ಬೆಳಗಿನ ಜಾವ ಸುಮಾರು 01-00 ಗಂಟೆ ಹಾಗೂ 27-12-2019 ರಾತ್ರಿ 08-00 ರ ನಡುವಿನ ಅವಧಿಯಲ್ಲಿ ಬೆಳಗಿನ ಜಾವ 01-00 ಗಂಟೆ ಸಮಯಲ್ಲಿ ಹೊನ್ನಾವರ ಪೋಲೀಸ್ ಠಾಣಾ ಸರಹದ್ದಿನಲ್ಲಿರುವ ಹೊನ್ನಾವರ ತಾಲ್ಲೂಕಿನ ಹೊದಿಕೆಶಿರೂರ ಕೆಕ್ಕಾರ ಕ್ರಾಸ್ ಹತ್ತಿರ ಇರುವ ಚಾಸಾ-1 ಶ್ರೀಮತಿ ಮಾಣ್ಯೆಕ್ಯ ಕೋಂ ನಂಬಿಯಾರ ನಾಯ್ಕ ರವರ ವಾಸದ ಮನೆಯ ಮುಂದಿನ ಬಾಗಿಲದ ಚಿಲಕಕ್ಕೆ ಹಾಕಿದ್ದ ಬೀಗವನ್ನು ಕಬ್ಬಿಣದ ರಾಡಿನಿಂದ ಮುರಿದು ಕಳ್ಳತನ ಮಾಡುವ ಉದ್ದೇಶದಿಂದ ಮನೆಯೊಳಗೆ ಅತಿಕ್ರಮ ಪ್ರವೇಶ ಮಾಡಿ ಭಾರತೀಯ ಕಂಡ ಸಂಹಿತೆ ಕಲಂ 457 ರಡಿಯಲ್ಲಿ ಅಪರಾಧ ಎಸಗಿರುತ್ತೀರಿ ಎನ್ನುವ ದೋಷಾರೋಪಣೆಯನ್ನ ಹೊರಿಸುತ್ತಿದ್ದೇನೆ.

2) ಕೊನೇಯದಾಗಿ ಮೇಲ್ಕಂಡ ದಿನಾಂಕ , ಸ್ಥಳ ಹಾಗೂ ಸಮಯದಲ್ಲಿ ಮೇಲೆ ಹೇಳಿದ ವಿಷಯಕ್ಕೆ ಸಂಬಂಧಿಸಿದಂತೆ ನೀವುಗಳು ಮನೆಯೊಳಗಡೆ ಅತಿಕ್ರಮ ಪ್ರವೇಶ ಮಾಡಿ ಬೆಡರೂಮಿನಲ್ಲಿಟ್ಟಿದ್ದ ಕಬ್ಬಿಣದ ಕಪಾಟನ್ನ ಮೀಟಿ ತೆಗೆದು ಅದರಲ್ಲಿ ಇದ್ದ ಸುಮಾರು ರೂಪಾಯಿ 11,325/- ಬೆಲೆಯ, 2.440 ಗ್ರಾಂ ತೂಕದ ಒಂದು ಜೊತೆ ಬಂಗಾರದ ಜುಮುಕಿ ಕುಡುಕು ಮತ್ತು ಒಂದು ಜೊತೆ 2.090 ಗ್ರಾಂ ತೂಕದ ಬಂಗಾರದ ಜುಮುಕಿ ಕಳ್ಳತನ ಮಾಡಿ ಭಾರತೀಯ ದಂಡ ಸಂಹಿತೆ ಕಲಂ 380 ರಡಿಯಲ್ಲಿ ಅಪರಾಧ ಎಸಗಿರುತ್ತೀರಿ ಎನ್ನುವ ದೋಷಾರೋಪಣೆಯನ್ನ ಹೊರಿಸುತ್ತಿದ್ದೇನೆ.

ಪ್ರಶ್ನೆಃ 1. ಈಗ ಓದಿ ಹೇಳಿದ ದೋಷರೋಪಣೆಯು ನಿಮಗೆ ತಿಳಿಯಿತೇ?

ಉತ್ತರಃ

ಪ್ರಶ್ನೆಃ 2. ಸದರಿ ದೋಷರೋಪಣೆಯು ನೀವು ಒಪ್ಪಿಕೊಳ್ಳುತ್ತಿರೋ ಅಥವಾ ವಿಚಾರಣೆ ಆಗಬೇಕೊ?

ಉತ್ತರಃ

(ಸದರಿ ದೋಷರೋಪಣೆಯು ಆರೋಪಿಗೆ ಗೊತ್ತಿರುವ ಕನ್ನಡ ಭಾಷೆಯಲ್ಲಿ ಓದಿ ವಿವರಿಸಿ ಹೇಳಲಾಯಿತು. ಪ್ರಶ್ನೆಗಳನ್ನ ಸಹ ಆರೋಪಿಗೆ ಗೊತ್ತಿರುವ ಕನ್ನಡ ಭಾಷೆಯಲ್ಲಿ ಓದಿ ವಿವರಿಸಿ ಹೇಳಿ ಆತ ನೀಡಿದ ಉತ್ತರಗಳನ್ನ ನನ್ನ ಸ್ವಹಸ್ತಾಕ್ಷರಗಳಿಂದ ಬರೆದುಕೊಳ್ಳಲಾಗಿರುತ್ತದೆ)

ದಿನಾಂಕಃ24-09-2021.

ಸ್ಥಳಃ ಹೊನ್ನಾವರ.

**ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾಕಂಡಾಧಿಕಾರಿಗಳು, ಹೊನ್ನಾವರ.**